ಅವನೀಗ ಸ್ಮಾರ್ಟ್ ಆಗಿ ಕಾಣುತ್ತಿದ್ದ. ನಾವು ಹೊರಟೆವು. ಕಾರಿನಲ್ಲಿ ಹೋಗುವುದು ಬೇಡ, ನಗರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಷ್ಟ, ಬಸ್‌ನಲ್ಲಿಯೇ ಹೋಗುವುದಾಗಿ ಯೋಚಿಸಿದೆವು. ನಾವು ಬಸ್ ಸ್ಟಾಪ್ ಕಡೆಗೆ ಹೋಗುತ್ತಿರುವಾಗ, ಬಸ್ 5ಎ ಸ್ಟಾಪ್‌ನಲ್ಲಿ ನಿಂತಿದ್ದನ್ನು ನೋಡಿದೆವು, ನಾವು ಇದೇ ಬಸ್‌ನಲ್ಲಿ ಹೋಗಬೇಕಿತ್ತು.

ನಾವು ಬಸ್ ಬಳಿಗೆ ಓಡಿದೆವು. ಪೆನ್ಸಿಲ್ ಹಿಲ್‌ನಲ್ಲಿ ಓಡುವುದು ಕಷ್ಟವಾಗಿತ್ತು, ಆದರೂ ನಾನು ಓಡುತ್ತಿದ್ದೆ. ಬಸ್ ಚಾಲಕ ಸೈಡ್ ಮಿರರ್‌ನಲ್ಲಿ ನಾವು ಓಡಿ ಬರುತ್ತಿರುವುದನ್ನೂ ನೋಡಿದ, ಆದರೆ ಅವನು ಬಸ್ ನಿಲ್ಲಿಸಲಿಲ್ಲ, ಬಸ್ ಹೊರಟುಹೋಯಿತು. ನನ್ನಿಂದಾಗಿ ಬಸ್ ಮಿಸ್ ಆಯಿತು ಎಂದು ಲಾರ್ಸ್ ನನ್ನ ಮೇಲೆ ರೇಗಿದ. ಹತ್ತು ನಿಮಿಷಗಳ ನಂತರ ಎರಡನೆಯ ಬಸ್ ಇತ್ತು, ಐದು ಗಂಟೆಯ ಸಿನಿಮಾಕ್ಕೆ ಹೋಗಲು ಸಾಧ್ಯವಿರಲಿಲ್ಲ. ನಾನು ಲಾರ್ಸ್‌ಗೆ, ಇಂದು ಅಡ್ಡಾಡೋಣ, ಊಟ ಮಾಡೋಣ, ಇನ್ನೊಂದು ದಿನ ಸಿನಿಮಾ ನೋಡೋಣ ಅಥವಾ ಮೊದಲು ಊಟ ಮಾಡೋಣ, ರಾತ್ರಿಯ ಸಿನಿಮಾಕ್ಕೆ ಹೋಗೋಣ ಎಂದೆಲ್ಲಾ ಅನೇಕ ಸಾಧ್ಯತೆಗಳನ್ನು ಹೇಳಿದೆ. ಆದರೆ ಅವನು, 'ನೀನು ತಯಾರಾಗಲು ತಡ ಮಾಡಿದೆ, ಹೈಹೀಲ್ಡ್ ಏಕೆ ಹಾಕಿಕೊಂಡೆ, ಇಂಥ ಚಪ್ಪಲಿಗಳಲ್ಲಿ ನಿನಗೆ ನಡೆಯಲು ಬರುವುದಿಲ್ಲ, ನಿನ್ನಿಂದಾಗಿ ಬಸ್ ತಪ್ಪಿತು' ಎಂದು ಒಂದೇ ಸಮನೆ ಬಡಬಡಿಸಿದ.

'ಲಾರ್ಸ್, ಬಸ್ಸಷ್ಟೇ ಮಿಸ್ಸಾಯ್ತು. ತಲೆಯ ಮೇಲೆ ಆಕಾಶವಂತೂ ಬೀಳಲಿಲ್ಲ. ನೀವೇಕೆ ಸಣ್ಣ ಸಣ್ಣ ವಿಷಯವನ್ನೂ ದೊಡ್ಡದು ಮಾಡಲು ನೋಡ್ತೀರಿ? ನಿಮ್ಮ ಈ ಸ್ವಭಾವ ನಿಮಗೆ, ನನಗೆ ಮತ್ತು ನಮ್ಮ ಸಂಬಂಧಕ್ಕೆ ಘಾತಕವಾಗಿದೆ.'

ಆಗ ಅವನು ರೇಗಿ ನನ್ನನ್ನು ಜೋರಾಗಿ ತಳ್ಳಿದ. ನಾನು ಆ ರಭಸಕ್ಕೆ ಕಲ್ಲುಗಳಿದ್ದ ಆ ರಸ್ತೆಯಲ್ಲಿ ದಢಾರನೆ ಬಿದ್ದೆ. ಹೈ ಮತ್ತು ಪೆನ್ಸಿಲ್ ಹಿಲ್‌ನ ಸ್ಯಾಂಡಲ್ ಧರಿಸಿದ್ದರಿಂದ ನಾನು ಓಲಾಡುತ್ತಾ ತಡಬಡಿಸಿದೆ. ರಸ್ತೆಯಲ್ಲಿ ಹೋಗುತ್ತಿದ್ದವರು ನಿಂತರು. ಎಲ್ಲರಿಗೂ ಆಶ್ಚರ್ಯವಾಗಿತ್ತು. ಎದುರಿನಿಂದ ಬರುತ್ತಿದ್ದ ಜೋಡಿಯೊಂದು ತಕ್ಷಣ ನನ್ನ ಬಳಿಗೆ ಬಂತು. ಮಹಿಳೆ ನನಗೆ ಆಸರೆ ಕೊಟ್ಟು ಕೇಳಿದಳು, 'ನೀವು ಆರಾಮವಾಗಿರುವಿರಿ ತಾನೆ? ಎಲ್ಲೂ ಪೆಟ್ಟು ಬೀಳಲಿಲ್ಲ ತಾನೆ?'

ನಾನು ತೀವ್ರ ಅವಮಾನಕ್ಕೆ ಒಳಗಾಗಿದ್ದೆ. ರಸ್ತೆಯಲ್ಲಿ ನನ್ನ ಮಾನ ಹೋಗುತ್ತಿತ್ತು. ಆದರೂ ನಾನು ಏಳುತ್ತಾ, ನನ್ನ ಉಡುಪುಗಳನ್ನು ಜಾಡಿಸಿಕೊಂಡು ಅವರಿಗೆ ಹೇಳಿದೆ, 'ನಾನು ಚೆನ್ನಾಗಿದ್ದೇನೆ. ನನಗೆ ಪೆಟ್ಟು ಬಿದ್ದಿಲ್ಲ. ಸ್ವಲ್ಪ ತರಚಿದಂತಾಗಿದೆ, ಅಷ್ಟೆ'. ಹೀಗೆಂದು ವೇಗವಾಗಿ ಮುಂದಕ್ಕೆ ಹೋದೆ. ನಾನು ಆ ದೃಶ್ಯದಿಂದ ದೂರ ಹೋಗಲು ಹಾಗೂ ಎಲ್ಲರ ಕಣ್ಣುಗಳಿಂದ ಮರೆಯಾಗಲು ಬಯಸುತ್ತಿದ್ದೆ.

ನಾನು ಇನ್ನೂ ಮುಂದೆ ಹೋದಾಗ, ನನ್ನ ಕಿವಿಗಳಿಗೆ ಜಗಳದ ಮತ್ತು ಹೊಡೆದಾಟದ ಧ್ವನಿ ಕೇಳಿಸಿತು. ನಾನು ಹೊರಳಿ ನೋಡಿದೆ. ಇಬ್ಬರು ವ್ಯಕ್ತಿಗಳು ಲಾರ್ಸ್‌ನ ಅಕ್ಕಪಕ್ಕ ನಿಂತು, ಅವನಿಗೆ ಹೊಡೆಯುತ್ತಿದ್ದರು. ಇಬ್ಬರೂ ಎತ್ತರದ ಮತ್ತು ದಷ್ಟಪುಷ್ಟ ವ್ಯಕ್ತಿಗಳಾಗಿದ್ದರು, ಲಾರ್ಸ್ ಕೃಶಕಾಯದ ಕುಳ್ಳ ವ್ಯಕ್ತಿಯಾಗಿದ್ದ. ನನಗೆ ಲಾರ್ಸ್ ಬಗ್ಗೆ ಕರುಣೆ ಮೂಡಿತು. ನಾನು ಮರಳಿ ಬಂದು, ಆ ಇಬ್ಬರಲ್ಲಿ, ಇವರಿಗೆ ಹೊಡೆಯಬೇಡಿ, ಇವರು ನನ್ನ ಪತಿ ಎಂದು ವಿನಂತಿಸಿಕೊಂಡೆ. ನನ್ನ ವಿನಂತಿಯನ್ನು ಕೇಳಿ ಅವರು ಲಾರ್ಸ್‌ನನ್ನು ಬಿಟ್ಟರು.

ನಾನು ಲಾರ್ಸ್‌ನ ಕೈಹಿಡಿದು ಹೇಳಿದೆ, 'ಲಾರ್ಸ್, ಮನೆಗೆ ಹೋಗೋಣ.' ಲಾರ್ಸ್‌ನ ಶರ್ಟ್ ಪ್ಯಾಂಟಿನಿಂದ ಹೊರ ಬಂದಿತ್ತು, ತಲೆಗೂದಲುಗಳು ಅಸ್ತವ್ಯಸ್ತವಾಗಿದ್ದವು. ಅವನ ಮುಖದ ಆಕೃತಿ ಬದಲಾಗಿತ್ತು. ದಾರಿಹೋಕರಿಂದ ಹೊಡೆತ ತಿಂದು ಅವಮಾನಿತನಾಗಿದ್ದ ಅವನು ನನ್ನೊಂದಿಗೆ ಮಾತನಾಡಲು ಅಥವಾ ಹೊಂದಾಣಿಕೆ ಮಾಡಿಕೊಳ್ಳಲು ಬಯಸುತ್ತಿರಲಿಲ್ಲ; ಅವನ ಅಭಿಪ್ರಾಯದಲ್ಲಿ, ಆ ವ್ಯಕ್ತಿಗಳು ನನ್ನಿಂದಾಗಿಯೇ ಅವನನ್ನು ಹೊಡೆಯಲು ಬಂದಿದ್ದರು!

'ಇವನ ಅದೃಷ್ಟ ಚೆನ್ನಾಗಿದೆ, ಇಂಥ ಹುಡುಗಿ ಇವನಿಗೆ ಸಿಕ್ಕಿದ್ದಾಳೆ' ಒಬ್ಬ ಹೇಳಿದ, 'ಇನ್ನೂ ಇವನಿಗೆ ಸಮಾಧಾನ ಮಾಡ್ತಿದ್ದಾಳೆ, ಇವನಿಗೆ ಚಪ್ಪಲಿಯಿಂದ ಹೊಡೆಯಬೇಕು.'

'ನೀವು ದಯವಿಟ್ಟು ಹೋಗಿ...' ನಾನು ಅವರಿಗೆ ಹೇಳಿದೆ.

ಆ ಜೋಡಿ ಮುಂದಕ್ಕೆ ಹೊರಟಿತು. ಉಳಿದವರು ಸಹ ಮುಂದೆ ಹೋದರು.

'ಲಾರ್ಸ್ ಬನ್ನಿ, ಮನೆಗೆ ಹೋಗೋಣ'. ನಾನು ಲಾರ್ಸ್‌ಗೆ ಸಮಾಧಾನ ಮಾಡಿದೆ. ಲಾರ್ಸ್ ಮೌನವಾಗಿ ಮನೆಯ ಕಡೆಗೆ ನಡೆದ. ಆದರೆ ನನ್ನಿಂದ ಅಂತರವನ್ನು ಕಾಯ್ದುಕೊಂಡ. ನಮ್ಮಿಬ್ಬರ ಮೂಡ್ ಹಾಳಾಗಿತ್ತು. ನಾವು ಸಿನಿಮಾ ನೋಡದೆ, ಊಟ ಮಾಡದೆ ಮನಗೆ ಮರಳಿ ಬಂದೆವು. ಹಸಿದು ಮಲಗಿದೆವು.

***

ನನಗೆ ಆಶ್ಚರ್ಯವಾಗುತ್ತಿತ್ತು... ನನ್ನದು ಎಂಥ ದುರದೃಷ್ಟ! ಮೊದಲ ಪತಿ ಚರ್ಚ್‌ನ ಪೂಜಾರಿ ಮತ್ತು ಅಶ್ಲೀಲ ಸಾಹಿತ್ಯದ ಪ್ರೇಮಿ... ಅವನು ಮಹಿಳೆಯರೊಂದಿಗೆ ಚೆಲ್ಲಾಟವಾಡುತ್ತಿದ್ದ. ಎರಡನೆಯ ಪತಿ ಒಂದು ಸಭ್ಯ ದೇಶದ ನಾಗರಿಕನಾಗಿದ್ದು, ಗಮಾರನಂತೆ ಹೊಡೆದು ಬಡಿದು ನಿಂದಿಸುತ್ತಾನೆ. ಎಂಥ ವಿಡಂಬನೆ!

ಆದರೆ ನಾನು ಸೋಲೊಪ್ಪಿಕೊಳ್ಳಲು ಬಯಸುತ್ತಿರಲಿಲ್ಲ, ನಾನು ಲಾರ್ಸ್‌ನ ಮನಸ್ಸನ್ನು ಗೆಲ್ಲಲು ಬಯಸುತ್ತಿದ್ದೆ, ಅವನನ್ನು ಸಂತಸಪಡಿಸಲು ಅವನಿಗಾಗಿ ಒಳ್ಳೊಳ್ಳೆಯ ಅಡುಗೆಗಳನ್ನು ಮಾಡುತ್ತಿದ್ದೆ. ತಟ್ಟೆ ತುಂಬಾ ಊಟವನ್ನು ಬಡಿಸುತ್ತಿದ್ದೆ. ತಿನ್ನುವ ಬಗ್ಗೆ ಅವನಿಗೆ ಅತೀವ ಆಸಕ್ತಿಯಿತ್ತು. ನಾನು ಲಾರ್ಸ್‌ನ ತಾಯಿ ಲಾರಾರೊಂದಿಗೆ ಮಾತನಾಡಿದೆ. ಅವರು, 'ಅವನಿಗೆ ಸಿಟ್ಟು ಬಂದಾಗ ನೀನು ಅವನ ಎದುರು ಇರಬೇಡ. ಅವನಿಗೆ ಬಾಲ್ಯದಿಂದ ಕೈ ಎತ್ತಿ ಹೊಡೆಯುವ ಅಭ್ಯಾಸವಿದೆ. ಅವನು ಒಮ್ಮೆ ತನ್ನ ತಂದೆ–ತಾಯಿಯ ಬಗ್ಗೆಯೂ ಹಿಂಸೆಯಿಂದ ವರ್ತಿಸಿದ್ದನ್ನು ನೋಡಿದ್ದೇನೆ. ಅದೊಂದು ದಿನ ಅವನ ತಂದೆ ನಮ್ಮ ಮನೆಗೆ ಬಂದಿದ್ದರು. ತಂದೆ ಮತ್ತು ಮಗನ ನಡುವೆ ಏನೋ ತಕರಾರು ಆರಂಭವಾಯಿತು, ಲಾರ್ಸ್ ಎದ್ದು ಬಂದು ತಂದೆಯ ಮೇಲೆ ಕೈಮಾಡಿದ. ಅವನು ಮತ್ತೆ ಹೊಡೆಯುವುದಕ್ಕೆ ಮೊದಲು ನಾನು ನಡುವೆ ಹೋದೆ. ಅವರ ತಂದೆ ಹೊಡೆತ ತಿಂದು ಮೌನವಾಗಿ ನಮ್ಮ ಮನೆಯಿಂದ ಹೊರಟು ಹೋದರು. ನನಗೆ ಅವರ ಬಗ್ಗೆ ಕರುಣೆ ಹುಟ್ಟಿತು' ಎಂದರು.

ನನಗಿದೆಲ್ಲವೂ ಆಶ್ಚರ್ಯಪಡುವ ಮತ್ತು ಕಳವಳಗೊಳ್ಳುವ ವಿಚಿತ್ರ ಸಂಗತಿಗಳಾಗಿದ್ದವು. ಲಾರ್ಸ್‌ನ ತಂದೆ–ತಾಯಿ ಇದಕ್ಕೆಲ್ಲಾ ಒಗ್ಗಿಕೊಂಡಿದ್ದರು ಎಂಬುದು ಪ್ರತ್ಯೇಕ; ಹೀಗಾಗಿ ಮಗನ ಹೊಡೆತಗಳಿಂದ ಅವರು ಪಾರಾಗುತ್ತಿದ್ದರು, ಅವರೆಂದೂ ತಿರುಗಿ ಹೊಡೆಯುತ್ತಿರಲಿಲ್ಲ. ಹೆಚ್ಚೆಂದರೆ ಅವನ ಎದುರಿನಿಂದ ಎದ್ದು ದೂರಕ್ಕೆ ಹೋಗುತ್ತಿದ್ದರು. ವಾರಗಟ್ಟಲೆ ಮಗನೊಂದಿಗೆ ಮಾತನಾಡುತ್ತಿರಲಿಲ್ಲ. ಅವನ ಮುಖವನ್ನು ನೋಡುತ್ತಿರಲಿಲ್ಲ. ಆದರೆ ನಾನು ಲಾರ್ಸ್‌ನ ಹೆಂಡತಿಯಾಗಿದ್ದೆ. ನನ್ನ ಪತಿಯೊಂದಿಗೆ ವಾರಗಟ್ಟಲೆ ಮಾತನಾಡದೆ, ಅವನ ಮುಖವನ್ನು ನೋಡದೆ ಇರಲು ಹೇಗೆ ಸಾಧ್ಯ? ವಿಚಿತ್ರ ಪರಿಸ್ಥಿತಿಯಾಗಿತ್ತು. ಮತ್ತೆ ಅದೇ ಪ್ರಶ್ನೆ... ಎಲ್ಲಿಗೆ ಹೋಗಲಿ? ಏನು ಮಾಡಲಿ?

ನನಗೆ ಬಂದಿದ್ದ ಬಂಜೆತನ ನನ್ನ ಇನ್ನೊಂದು ವಿಷಾದಕ್ಕೆ ಕಾರಣವಾಗಿತ್ತು. ನಾನು ನನ್ನನ್ನೇ ಹಳಿದುಕೊಳ್ಳುತ್ತಿದ್ದೆ. ನಾನು ಮಗುವಿಗೆ ಜನ್ಮಕೊಡುವ ಸಾಮರ್ಥ್ಯವನ್ನು ಕಳೆದುಕೊಂಡಿದ್ದೇನೆಯೇ? ಲಾರ್ಸ್ ಮೌನಿಯಾಗಿ ಕೇಳುತ್ತಿದ್ದ. ನಾನು ನನ್ನನ್ನು ಚೆಕ್‌ಅಪ್ ಮಾಡಿಸಿಕೊಳ್ಳಲು ಗೈನಕಾಲಜಿಸ್ಟ್ ಬಳಿಗೆ ಹೋದೆ. ಅವರಿಗೆ, ನಾನು ಮತ್ತು ನನ್ನ ಪತಿ ಯಾವುದೇ ಗರ್ಭನಿರೋಧಕಗಳನ್ನು ಉಪಯೋಗಿಸುತ್ತಿಲ್ಲ, ಆದರೂ ನಾನು ಕನ್ಸೀವ್ ಆಗುತ್ತಿಲ್ಲ ಎಂದೆ.

ವೈದ್ಯರು ಹೇಳಿದರು: ಸಂತಾನೋತ್ಪತ್ತಿಗೆ ವಯಸ್ಸು ತುಂಬಾ ಮಹತ್ವದ್ದು. ಮೂವತ್ತೈದರ ನಂತರದಿಂದ ಮಹಿಳೆಯರ ಸಂತಾನೋತ್ಪತ್ತಿಯ ಸಾಮರ್ಥ್ಯ ಕಡಿಮೆಯಾಗುತ್ತಾ ಹೋಗುತ್ತದೆ, ಆದರೆ ಮೂವತ್ತೈದರ ವಯಸ್ಸಿನಲ್ಲೂ ಬಹುತೇಕ ಮಹಿಳೆಯರು ಪ್ರಾಕೃತಿಕ ವಿಧಾನದಿಂದ ಗರ್ಭದಾನ ಮಾಡಬಹುದು; ಗರ್ಭಿಣಿಯಾದಾಗ ಆರೋಗ್ಯಕರ ಮಗುವಿಗೆ ಜನ್ಮ ಕೊಡಬಹುದು.

ನನ್ನ ಬ್ಲಡ್ ಮತ್ತು ಹಾರ್ಮೋನ್‌ಗಳ ಟೆಸ್ಟ್‌ಗಳನ್ನು ಮಾಡಿಸಲಾಯಿತು, ಹಿಸ್ಟರೊಸ್ಕೋಪಿಯಾಯಿತು. ಎಲ್ಲಾ ಪರೀಕ್ಷೆಗಳಿಂದ, ನನ್ನಲ್ಲಿ ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಎಲ್ಲವೂ ಸರಿಯಿದೆ ಎಂದು ತಿಳಿಯಿತು. ಪುರುಷರಲ್ಲೂ ಬಂಜೆತನ ಇರುತ್ತದೆ, ನಿಮ್ಮ ಪತಿಯನ್ನು ಪರೀಕ್ಷೆ ಮಾಡಿಸಿ ಎಂದು ವೈದ್ಯರು ಹೇಳಿದರು. ನಾನು ಲಾರ್ಸ್‌ಗೆ ಅನೇಕ ಬಾರಿ ಚೆಕ್‌ಅಪ್ ಮಾಡಿಸಿಕೊಳ್ಳುವಂತೆ ಹೇಳಿದೆ. ಆದರೆ ಅವನು ಪ್ರತಿ ಬಾರಿಯೂ ಅಲ್ಲಗೆಳೆದ. ನನಗೇಕೋ ಅನುಮಾನ ಕಾಡಲಾರಂಭಿಸಿತು. ಅವನೆಲ್ಲಿಯಾದರೂ...?